NOVEMBER 22, 2024

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ರಾಜ್ಯದ ಒಟ್ಟು 16 ಹಾಲು ಒಕ್ಕೂಟಗಳಿಂದ, ಕೋಟಿ ಲೀಟರ್ ಹಾಲು ಉತ್ಪಾದನೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಅರ್ಹರಿಗೆ ಸರ್ಕಾರಿ ಸವಲತ್ತುಗಳನ್ನು, ಸರಿಯಾಗಿ ತಲುಪಿಸುವುದು, ಕಾರ್ಯಾಂಗದ, ಹೊಣೆ – ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ.
- 'ಸುರ ಸ್ವಾಸ್ಥ್ಯ' ಯೋಜನೆ; ರಾಜ್ಯದ 5 ಸಾವಿರ ಆರೋಗ್ಯ ಕೇಂದ್ರಗಳಲ್ಲಿ, ಸೌರ ವಿದ್ಯುತ್ ಅಳವಡಿಕೆ – ದಿನೇಶ ಗುಂಡೂರಾವ್.
- ಶಿವಮೊಗ್ಗದ ತ್ಯಾವರೆಕೊಪ್ಪ ಹುಲಿ–ಸಿಂಹಧಾಮದ, ಪ್ರಾಣಿ–ಪಕ್ಷಿ ಪ್ರಭೇದಗಳ ಸಂಖ್ಯೆ, 34ಕ್ಕೆ ಏರಿಕೆ.

<><><>

ಈಗ ವಾರ್ತೆಗಳ ವಿವರ

<><><>

ಹರ್ಷ

ರಾಜ್ಯದಲ್ಲಿ ಒಟ್ಟು 16 ಹಾಲು ಉತ್ಪಾದಕ ಒಕ್ಕೂಟಗಳಿದ್ದು, ಅಂದಾಜು 1 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಆಂಧ್ರಪ್ರದೇಶ, ಮಹಾರಾಷ್ಟ್ರಕ್ಕೆ ನಿತ್ಯ, ತಲಾ ಎರಡೂವರೆ ಲಕ್ಷ ಲೀಟರ್ ಹಾಲು ಪೂರೈಕೆಯಾಗುತ್ತಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಹೇಳಿದ್ದಾರೆ. ಹೊಸ ದಿಲ್ಲಿಯಲ್ಲಿ ಆಯೋಜಿಸಿದ್ದ, ನಂದಿನಿ ವಿವಿಧ ಶ್ರೇಣಿಯ ಹಾಲಿನ ಪ್ಯಾಕೆಟ್‌ಗಳ ಬಿಡುಗಡೆ ಸಮಾರಂಭದಲ್ಲಿ, ಅವರು ಮಾತನಾಡಿದರು. ಹಾಲಿನ ಪ್ರೋತ್ಸಾಹ ಧನಕ್ಕಾಗಿ, ಪ್ರತಿ ದಿನ 5 ಕೋಟಿ ರೂಪಾಯಿಗಳನ್ನು ಸರ್ಕಾರ ವೆಚ್ಚ ಮಾಡುತ್ತಿದೆ ಎಂದು, ಮುಖ್ಯಮಂತ್ರಿ ತಿಳಿಸಿದರು. ಹಾಲು ಉತ್ಪಾದನೆಯಲ್ಲಿ ಕರ್ನಾಟಕ ದೇಶಕ್ಕೆ ಎರಡನೇ ಸ್ಥಾನದಲ್ಲಿದೆ. ಕೆ.ಎಂ.ಎಫ್ ಮತ್ತು ಮಂಡ್ಯ ಹಾಲು ಒಕ್ಕೂಟ, ಆರಂಭಿಕ ಹಂತದಲ್ಲಿ ಎರಡೂವರೆ ಲಕ್ಷ ಲೀಟರ್ ಹಾಲನ್ನು, ರಾಷ್ಟ್ರ ರಾಜಧಾನಿ, ಹೊಸ ದಿಲ್ಲಿಗೆ ಪೂರೈಸುವ ಯೋಜನೆ ರೂಪಿಸಿವೆ. ಮುಂದಿನ ಆರು ತಿಂಗಳಲ್ಲಿ, 5 ಲಕ್ಷ ಲೀಟರ್‌ಗೆ ಏರಿಸುವ ಗುರಿ ಇದೆ ಎಂದರು.

<><><>

'ನಬಾರ್ಡ್'ನ ಕೃಷಿ ಸಾಲವನ್ನು, ಶೇಕಡ 58ರಷ್ಟು ಕಡಿತಗೊಳಿಸಿದ್ದು, ರಾಜ್ಯದ ರೈತರಿಗೆ ಬಹು ದೊಡ್ಡ ಸಂಕ ್ಟ ತಂದೊಡ್ಡಿದೆ. ಸಾಲದ ಮಿತಿಯನ್ನು ಹೆಚ್ಚಿಸಿ ರೈತರಿಗೆ ನೆರವಾಗುವಂತೆ, ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಲಾಗಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. ಹೊಸ ದಿಲ್ಲಿಯಲ್ಲಿ ಮುಖ್ಯಮಂತ್ರಿ ಅವರು, ಕೇಂದ್ರ ಸಚಿವರನ್ನು ಭೇಟಿ ಮಾಡಿ ಈ ಬಗ್ಗೆ ಚರ್ಚಿಸಿದರು. ಪ್ರಸಕ್ತ ಸಾಲಿನಲ್ಲಿ ರಾಜ್ಯದ 35 ಲಕ್ಷ ರೈತರಿಗೆ, 25 ಸಾವಿರ ಕೋಟಿ ರೂಪಾಯಿ ಅಲ್ಪಾವಧಿ ಕೃಷಿ ಸಾಲ ವಿತರಿಸುವ ಗುರಿ ಇದೆ. ನಬಾರ್ಡ್‌ಗೆ 9 ಸಾವಿರದ 162 ಕೋಟಿ ರೂಪಾಯಿ ಪ್ರಸ್ತಾವ ಸಲ್ಲಿಸಿದರೂ, ಕೇವಲ 2 ಸಾವಿರದ 340 ಕೋಟಿ ರೂಪಾಯಿ ಮಾತ್ರ ಮಂಜೂರು ಮಾಡಿದೆ ಎಂದು, ಸಚಿವರು ಹೇಳಿದ್ದಾರೆ.

<><><>

ನಬಾರ್ಡ್ ನಿಂದ, ಕರ್ನಾಟಕದ ರೈತರಿಗೆ ನೀಡುವ ರಿಯಾಯಿತಿ ದರದ ಸಾಲದ ಮೊತ್ತ ಕಡಿಮೆಯಾಗಿದೆ ಎಂಬ, ಆರೋಪದಲ್ಲಿ ಸತ್ಯಾಂಶವಿಲ್ಲ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸ್ಪಷ್ಟ ಪಡಿಸಿದ್ದಾರೆ. ಹೊಸ ದಿಲ್ಲಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಕೃಷಿ ಸೇರಿದಂತೆ, ಆದ್ಯತಾ ವಲಯಗಳಿಗೆ ರಿಯಾಯಿತಿ ದರದಲ್ಲಿ ನೀಡುವ, ಸಾಲದ ಮೊತ್ತವನ್ನು ನಬಾರ್ಡ್ ಈ ಬಾರಿ, ಕರ್ನಾಟಕ ಮಾತ್ರವಲ್ಲದೇ, ಎಲ್ಲ ರಾಜ್ಯಗಳಿಗೆ ಕಡಿತ ಮಾಡಿದೆ. ಬ್ಯಾಂಕ್‌ಗಳು ಕೃಷಿ ವಲಯಕ್ಕೆ ಹೆಚ್ಚಿನ ಸಾಲವನ್ನು ನೀಡುತ್ತಿವೆ ಎಂದು ವಿವರಿಸಿದರು.

<><><>

ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು, ಧಾರವಾಡ ಜಿಲ್ಲೆಯ ಸಾರ್ವಜನಿಕರಿಂದ, ಒಟ್ಟು 95 ದೂರುಗಳನ್ನು ಸ್ವೀಕರಿಸಿ, ವಿಚಾರಣೆ ಆರಂಭಿಸಿದ್ದಾರೆ. ಧಾರವಾಡ ಜಿಲ್ಲಾ ಪಂಚಾಯ್ತಿ ನೂತನ ಸಭಾಂಗಣದಲ್ಲಿ, ಉಪ ಲೋಕಾಯುಕ್ತರು 57 ಅರ್ಜಿಗಳ ಪ್ರಾಥಮಿಕ ವಿಚಾರಣೆ ನಡೆಸಿ, ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ, 30 ದೂರುಗಳನ್ನು ದಾಖಲಿಸಿದ್ದಾರೆ. ಉಳಿದ 38 ದೂರುಗಳನ್ನು ಇಂದು, ವಿಚಾರಣೆಗೆ ಅವರು ಕೈಗೆತ್ತಿಕೊಳ್ಳಲಿದ್ದಾರೆ.

<><><>

ಈ ಸಂದರ್ಭದಲ್ಲಿ ಮಾತನಾಡಿದ, ನ್ಯಾಯಮೂರ್ತಿ ಫಣೀಂದ್ರ ಅವರು, ಲೋಕಾಯುಕ್ತದ 7, 8 ಮತ್ತು 9ನೇ ಕಲಂಗಳನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಉಚ್ಚ ನ್ಯಾಯಾಲಯಕ್ಕಿರುವ ಅಧಿಕಾರವನ್ನು, ಕಲಂ 17ರ ಅಡಿ, ಲೋಕಾಯುಕ್ತ ಕೂಡ ಹೊಂದಿದೆ ಎಂದರು. ಅರ್ಹರಿಗೆ ಸರ್ಕಾರಿ ಸವಲತ್ತುಗಳನ್ನು ಸರಿಯಾಗಿ ತಲುಪಿಸುವ ಜವಾಬ್ದಾರಿ ಕಾರ್ಯಾಂಗದ್ದು. ಸರ್ಕಾರದ ಕಲ್ಪಿತ ಕಾರ್ಯಗಳ, ಕಾಲಮಿತಿ ಅನು ್ಠಾನದಲ್ಲಿ ಬದ್ಧತೆಯೊಂದೇ ಸೂತ್ರ ಎಂದು, ನ್ಯಾಯಮೂರ್ತಿ ಫಣೀಂದ್ರ ಹೇಳಿದರು.

<><><>

ಭಾರತ ರತ್ನ ಸರ್ ಎಂ.ವಿಶ್ವೇಶ್ವರಾಯ ಅವರು, 1911 ರಲ್ಲಿ ನೀಲ ನಕ್ಷೆ ರೂಪಿಸಿ ಕಟ್ಟಿದ, ಧಾರವಾಡದ ಕೆಲಗೇರಿ ಕೆರೆಯನ್ನು ಸ್ವಚ್ಛಗೊಳಿಸಲು, 20 ದಿನಗಳ ಗಡುವು ವಿಧಿಸಿದ, ಉಪ ಲೋಕಾಯುಕ್ತರು, ಕರ್ತವ್ಯಲೋಪ ಗುರುತಿಸಿ, ಸೂಕ್ತ ತನಿಖೆ ಕೈಗೊಳ್ಳಲು, ಲೋಕಾಯುಕ್ತದಿಂದ ಸ್ವಯಂ ದೂರು ದಾಖಲಿಸಿಕೊಂಡು, ವಿಚಾರಣೆ ನಡೆಸಲಾಗುವುದು ಎಂದು, ತಿಳಿಸಿದರು.

<><><>

ವಿಶ್ವ ಶೌಚಗೃಹ ದಿನಾಚರಣೆ ಪ್ರಯುಕ್ತ, ಸ್ವಚ್ಛ ಭಾರತ್ ಮಿ ್ನ್ ಯೋಜನೆಯಡಿ, ಇಂದಿನಿಂದ ಡಿಸೆಂಬರ್ 10ರ ವರೆಗೆ, "ನಮ್ಮ ಶೌಚಾಲಯ, ನಮ್ಮ ಗೌರವ" ಘೋಷ ವಾಕ್ಯದೊಂದಿಗೆ ಹಾಗೂ "ಅಂದದ ಶೌಚಾಲಯ, ಆನಂದದ ಜೀವನ" ಎಂಬ ಧ್ಯೇಯದೊಂದಿಗೆ, ವಿಶೇ ್ ಆಂದೋಲನ ರಾಜ್ಯಾದ್ಯಂತ ಆಯೋಜಿಸಲಾಗಿದೆ. ಸ್ವಚ್ಛ ಭಾರತ್ ಮಿ ್ನ್ ಯೋಜನೆಯಡಿ,

ಶೌಚಾಲಯ ರಹಿತ ಅರ್ಹ ಫಲಾನುಭವಿಗಳು, ಶೌಚಾಲಯಗಳನ್ನು ಪಡೆಯಲು sbm.gov.in ಕೊಂಡಿ ಬಳಸಿ, Citizen App ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು.

<><><>

ಧಾರವಾಡ ಜಿಲ್ಲೆ, ಕಾಶೇನಟ್ಟಿಯ ಸರ್ಕಾರಿ ಹಿರಿಯ ಕನ್ನಡ ಪ್ರಾಥಮಿಕ ಶಾಲೆಯ 8ನೇ ತರಗತಿ ವಿದ್ಯಾರ್ಥಿನಿ, ಜೀಜಾಬಾಯಿ ಸುಭಾಷ್ ರತ್ನೋಜಿ, 'ಟ್ರಿಪಲ್–ಪಿ' ಮಾದರಿಯಲ್ಲಿ, ತಮ್ಮ ಶಾಲೆಯಲ್ಲಿ ನಿರ್ಮಾಣಗೊಂಡ, ಕೈತೊಳೆಯುವ ತೊಟ್ಟಿ ಮತ್ತು ಶೌಚಾಲಯಗಳಿಂದ, ಅವರು ಮತ್ತು ಅವರ ಗೆಳತಿಯರು, ತಪ್ಪದೇ ಶಾಲೆಗೆ ಬರುವಂತಾಗಿದೆ ಎಂದು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಜೀಜಾಬಾಯಿ ಸುಭಾಷ್ ರತ್ನೋಜಿ ಧ್ವನಿ 33 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಜ್ಯಾದ್ಯಂತ 5 ಸಾವಿರ ಆರೋಗ್ಯ ಕೇಂದ್ರಗಳಲ್ಲಿ, ಸೌರ ವಿದ್ಯುತ್ ಅಳವಡಿಸಲು, ರಾಜ್ಯ ಸರ್ಕಾರ, 'ಸುರ ಸ್ವಾಸ್ಥ್ಯ – 2024', ಮಹತ್ವದ ಯೋಜನೆಯನ್ನು ಪ್ರಾರಂಭಿಸಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ್ ತಿಳಿಸಿದ್ದಾರೆ. ಸುರ ಸ್ವಾಸ್ಥ್ಯ ಯೋಜನೆಗೆ, ಬೆಂಗಳೂರಿನ ಆರೋಗ್ಯಸೌಧದಲ್ಲಿ ಚಾಲನೆ ನೀಡಿ, ಅವರು ಮಾತನಾಡಿದರು. ಈಗಾಗಲೇ ಗ್ರಾಮೀಣ ಪ್ರದೇಶಗಳಲ್ಲಿ ಅಡೆತಡೆಯಿಲ್ಲದೇ, ಸಾವಿರದ ನೂರಾ 52 ಆರೋಗ್ಯ ಕೇಂದ್ರಗಳಲ್ಲಿ, ಆರೋಗ್ಯ ಸೇವೆಗಳನ್ನು, ಒದಗಿಸುತ್ತಿದೆ.. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ದೇಶದಲ್ಲಿಯೇ ಮೊದಲ ಬಾರಿಗೆ, ಸೆಲ್ಕೋ ಫೌಂಡೇಶನ್ ಸಹಯೋಗದಲ್ಲಿ, ಈ ಮಹತ್ವಾಕಾಂಕ್ಷೆಯ ಯೋಜನೆಯನ್ನು ಕಾರ್ಯಗತಗೊಳಿಸಿದೆ. 2026ರ ವೇಳೆಗೆ, ರಾಜ್ಯದ 5 ಸಾವಿರ ಆರೋಗ್ಯ ಕೇಂದ್ರಗಳಲ್ಲಿ, ಸೌರ ವಿದ್ಯುತ್ ವ್ಯವಸ್ಥೆ ಕಲ್ಪಿಸಲಾಗುವುದು ಎಂದು, ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ, ಸಚಿವರು ಪ್ರಕಟಿಸಿದ್ದಾರೆ.

<><><>

ರೆಮೋನ್ ಮ್ಯಾಗ್ಸೆಸ್ಸೆ ಪ್ರಶಸ್ತಿ ಪುರಸ್ಕೃತ, ಸೆಲ್ಕೋ – ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್, ಸಹ ಸಂಸ್ಥಾಪಕ ಹರೀಶ ಹಂದೆ ಪಾಲ್ಗೊಂಡಿದ್ದರು.

<><><>

ಶಿವಮೊಗ್ಗದ ತ್ಯಾವರೆಕೊಪ್ಪ ಹುಲಿ–ಸಿಂಹಧಾಮ ಮೃಗಾಲಯದಲ್ಲಿ, ಪ್ರಾಣಿ–ಪಕ್ಷಿ ಪ್ರಭೇದಗಳ ಸಂಖ್ಯೆ, ಒಟ್ಟು 30 ರಿಂದ 34ಕ್ಕೆ ಹೆಚ್ಚಳವಾಗಿದೆ ಎಂದು, ತ್ಯಾವರೆಕೊಪ್ಪದ ಉಪ ಅರಣ್ಯ ಸಂರಕ್ಷಣಾಧಿಕಾರಿ ತಿಳಿಸಿದ್ದಾರೆ. ಹೊಸ ದಿಲ್ಲಿಯ ಕೇಂದ್ರಿಯ ಮೃಗಾಲಯ ಪ್ರಾಧಿಕಾರ, ಶಿವಮೊಗ್ಗದ ತ್ಯಾವರೆಕೊಪ್ಪದ ಹುಲಿ–ಸಿಂಹಧಾಮದಿಂದ, ಕೇರಳದ ತಿರುವನಂತಪುರಂನ ಝೂಲಾಜಿಕಲ್ ಪಾರ್ಕ್ ಮೃಗಾಲಯಗಳ ನಡುವೆ, ಹೆಚ್ಚುವರಿ ಪ್ರಾಣಿಗಳ ವಿನಿಮಯ ಕೈಗೊಂಡಿದೆ.

<><><>

ತ್ಯಾವರೆಕೊಪ್ಪ ಹುಲಿ–ಸಿಂಹಧಾಮದಿಂದ ಮಾರ್ಶ್ ಕ್ರೋಕಡೈಲ್, ಸ್ಟ್ರಿಪ್ಡ್ ಹೈನಾ, ಇಂಡಿಯನ್ ಗೋಲ್ಡನ್ ಜಾಕಲ್, ಏಷಿಯನ್ ಪಾಮ್ ಸಿವೆಟ್‌ಗಳನ್ನು, ಕೇರಳದ ತಿರುವನಂತಪುರಂನ ಝೂಲಾಜಿಕಲ್ ಪಾರ್ಕ್‌ಗೆ ಕಳುಹಿಸಲಾಗಿದೆ. ಅಲ್ಲಿಂದ ಘರಿಯಾಲ, ಲೆಸ್ಸರ್ ರೀಹಾ, ಸ್ಟ್ರಿಪ್ಡ್ ಹೈನಾ, ಇಂಡಿಯನ್ ಕ್ರಾಸ್ ಟೋಡ್ ಪಾರ್ಕ್ಯುಪೈನ್, ಸನ್ ಕೌನ್ಸರ್ ಪ್ರಾಣಿಗಳನ್ನು, ತ್ಯಾವರೆಕೊಪ್ಪಕ್ಕೆ ತರಲಾಗಿದೆ.

<><><>

ಗಂಡು ಕತ್ತೆ ಕಿರುಬವನ್ನು, ವಿಶೇಷವಾಗಿ ಬ್ಲಡ್‌ಲೈನ್ ಎಕ್ಸ್‌ಚೇಂಜ್‌ಗಾಗಿ ವಿನಿಮಯ ಮಾಡಿಕೊಳ್ಳಲಾಗಿದೆ.

<><><>

ಬಳ್ಳಾರಿಯ ಲಂಬಾಣಿ ಕಸೂತಿ ಕಲೆ ಮೇಳೈಸಿದ, 'ರೆಡ್ ಡ್ರೆಸ್' ಸಿದ್ಧ ಉಡುಪು, ವಿಶ್ವದ 51 ದೇಶಗಳಲ್ಲಿ ಪ್ರದರ್ಶನಗೊಂಡಿದೆ. ಇಂಗ್ಲೆಂಡಿನ ಕರ್ಷಿಟ್ಲಿ ಮ್ಯಾಕ್ಲಿಲಿಯಾಡ್, ಕಲಾ ಸಂಶೋಧನಾ ವಿದ್ಯಾರ್ಥಿಯ, 14 ವರ್ಷಗಳ ಸತತ ಪ್ರಯತ್ನದಿಂದ, ಈ ವಿಶೇಷ ಉಡುಪು ಸಿದ್ಧಗೊಂಡಿದೆ. ಬಳ್ಳಾರಿ ಜಿಲ್ಲೆ ತೋರಣಗಲ್ಲಿನ, ವಿದ್ಯಾನಗರದ, ಜಿಂದಾಲ್ ಸ್ಟೀಲ್ ವರ್ಕ್ಸ ಸಹಭಾಗಿತ್ವದ, ಹಂಪಿ ಆರ್ಟ್ ಲ್ಯಾಬ್ಸ್‌ನಲ್ಲಿ ಈ ವಿಶೇಷ ಉಡುಪು ಪ್ರದರ್ಶನಗೊಂಡು, ಗಮನ ಸೆಳೆದಿದೆ. ವಿವಿಧ ದೇಶಗಳ 367 ಮಹಿಳಾ ಹಾಗೂ 11 ಜನ ಪುರುಷರು, ಇಬ್ಬರು ಲಿಂಗತ್ವ ಅಲ್ಪಸಂಖ್ಯಾತ ಕುಸುರಿ ಕಲೆಗಾರರು, 6 ಕಿಲೋ 800 ಗ್ರಾಂ ತೂಕದ ಉಡುಪನ್ನು, ಸಿದ್ಧ ಪಡಿಸಿದ್ದಾರೆ. ಹಂಪಿ ಆರ್ಟ್ ಲ್ಯಾಬ್ಸ್ ನಿರ್ದೇಶಕಿ ಮೀರಾ ಕುರಂ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಹಂಪಿ ಆರ್ಟ್ ಲ್ಯಾಬ್ಸ್ ನಿರ್ದೇಶಕಿ ಮೀರಾ ಕುರಂ ಧ್ವನಿ 45 ಸೆಕೆಂದುಗಳು

<><><>

ಹಾವೇರಿ ಜಿಲ್ಲೆ, ಹಾನಗಲ್ ವಿಧಾನಸಭಾ ಕ್ಷೇತ್ರದ, ಮಾಜಿ ಶಾಸಕ ಹಾಗೂ ವಿಧಾನಸಭೆ ಮಾಜಿ ಉಪ ಸಭಾಪತಿಯೂ ಆಗಿದ್ದ, ಮನೋಹರ ತಹಶೀಲ್ದಾರ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಅಕ್ಕಿವಳ್ಳಿ ಗ್ರಾಮದ ತೋಟದಲ್ಲಿ, ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಯಲಿದೆ. ಅವರಿಗೆ 78 ವರ್ಷ ವಯಸ್ಸಾಗಿತ್ತು. ಗಣ್ಯರು ಸಂತಾಪ ಸೂಚಿಸಿದ್ದಾರೆ.

<><><>

ನಾಲ್ಕನೇ ಶ್ರೇಯಾಂಕದ ಆಟಗಾರ, ಭಾರತದ ಕರಣ್ ಸಿಂಗ್, ಕಲಬುರಗಿಯಲ್ಲಿ ಆಯೋಜಿತ, ಐ.ಟಿ.ಎಫ್. ಪುರುಷರ ಟೆನಿಸ್ ಪಂದ್ಯಾವಳಿಯಲ್ಲಿ, ಗೆಲುವಿನ ಓಟ ಮುಂದುವರಿಸಿದ್ದಾರೆ. ಕ್ವಾರ್ಟರಫೈನಲ್‌ಗೆ ಅವರು ಅರ್ಹತೆ ಗಳಿಸಿದ್ದಾರೆ. ಕಲಬುರಗಿಯ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ, ಟೂರ್ನಿಯ ಸಿಂಗಲ್ಸ್ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಕರಣಸಿಂಗ್ 6–4, 6–3 ರಿಂದ, ಸ್ವದೇಶದ ನಿತಿನ್ ಕುಮಾರ ಸಿನ್ಹಾ ಅವರನ್ನು ಪರಾಭವಗೊಳಿಸಿದರು. ಅಗ್ರ ಶ್ರೇಯಾಂಕದ ಖಿಮೋಯಿನ್ ಸುಲ್ತಾನೋವ್ 6–4, 6–0 ಅಂತರದಿಂದ ಭಾರತದ ಧೀರಜ್ ಶ್ರೀನಿವಾಸ್ ವಿರುದ್ಧ ಗೆಲುವು ಸಾಧಿಸಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ದಾವಣಗೆರೆ ಜಿಲ್ಲೆಯಾದ್ಯಂತ, ಕಳೆದ ಏಳು ತಿಂಗಳಲ್ಲಿ, 28 ತಾಯಂದಿರು ಹಾಗೂ 135 ನವಜಾತ ಶಿಶುಗಳು ಮರಣ ಹೊಂದಿವೆ. 23 ತಾಯಂದಿರು ಸರ್ಕಾರಿ ಆಸ್ಪತ್ರೆಯಲ್ಲಿ ಹಾಗೂ ಜಿಲ್ಲಾ ಆಸ್ಪತ್ರೆಯ ನವಜಾತ ಶಿಶುಗಳ ತೀವ್ರ ನಿಗಾ ಘಟಕದಲ್ಲಿ, 111 ಶಿಶುಗಳು ಮೃತಪಟ್ಟಿವೆ.

<><><>

ನಕ್ಸಲರ ಮನವೊಲಿಸಿ, ಪೊಲೀಸರಿಗೆ ಶರಣಾಗಿ, ಮುಖ್ಯವಾಹಿನಿಗೆ ಸೇರ್ಪಡೆಗೊಳಿಸಲು, ಪ್ರಯತ್ನಿಸುವಂತೆ, ಪ್ರಗತಿಪರ ಚಿಂತಕರಿಗೆ ಗೃಹ ಖಾತೆ ಸಚಿವ ಪರಮೇಶ್ವರ್ ಮನವಿ ಮಾಡಿದ್ದಾರೆ.

<><><>

ನಕ್ಸಲರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಕೆಲಸ, ರಾಜ್ಯ ಸರ್ಕಾರದಿಂದ ನಡೆಯುತ್ತಿದೆ. ಶರಣಾಗತಿಗೂ ಸರ್ಕಾರ ಅವಕಾಶ ಕಲ್ಪಿಸಿದೆ ಎಂದು, ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ ಗುಂಡೂರಾವ್, ಮಂಗಳೂರಿನಲ್ಲಿ ಹೇಳಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಜ್ಯದ ಒಟ್ಟು 16 ಹಾಲು ಒಕ್ಕೂಟಗಳಿಂದ, ಕೋಟಿ ಲೀಟರ್ ಹಾಲು ಉತ್ಪಾದನೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಅರ್ಹರಿಗೆ ಸರ್ಕಾರಿ ಸವಲತ್ತುಗಳನ್ನು, ಸರಿಯಾಗಿ ತಲುಪಿಸುವುದು, ಕಾರ್ಯಾಂಗದ, ಹೊಣೆ – ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ.
- 'ಸುರ ಸ್ವಾಸ್ಥ್ಯ' ಯೋಜನೆ; ರಾಜ್ಯದ 5 ಸಾವಿರ ಆರೋಗ್ಯ ಕೇಂದ್ರಗಳಲ್ಲಿ, ಸೌರ ವಿದ್ಯುತ್ ಅಳವಡಿಕೆ – ದಿನೇಶ ಗುಂಡೂರಾವ್.
- ಶಿವಮೊಗ್ಗದ ತ್ಯಾವರೆಕೊಪ್ಪ ಹುಲಿ–ಸಿಂಹಧಾಮದ, ಪ್ರಾಣಿ–ಪಕ್ಷಿ ಪ್ರಭೇದಗಳ ಸಂಖ್ಯೆ, 34ಕ್ಕೆ ಏರಿಕೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ